ತ್ತಿಲ್ಲ. ಉದಾಹರಣೆ ಹೇಳಬೇಕೆಂದರೆ. ಹಾನ್‌ಗಲ್‌ನಲ್ಲಿ ರಾಮಣ್ಣ ಸಂಗಡಿಗರು ಬಹಳ ಚೆನ್ನಾಗಿ ಓಲಗ ಊದುತ್ತಾರೆ. ಅವರು ಅರ್ಜಿ ಕೊಟ್ಟರೂ ಸಹ ಇಲಾಖಾ ವತಿಯಿಂದ ಗಮನ ಕೊಟ್ಟಿಲ್ಲ. ಅಂತಹ ಜನರನ್ನು ಗ್ರಾಮಾಂತರ ಪ್ರದೇಶದಲ್ಲಿ ಪತ್ತೆ ಹಚ್ಚಿ ಪರಿಹಾರ ಕೊಡುವ ದೃಷ್ಟಿಯಿಂದ ೨೫೦ ರಿಂದ ೫೦೦ ರೂಪಾಯಿಗಳಿಗೆ ಹೆಚ್ಚು ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸೂಚನೆಯನ್ನು ಗಮನದಲ್ಲಿಡುತ್ತೇನೆ. ಆದರೆ ಅವರ ಗ್ರಹಿಕೆ ಸರಿಯಲ್ಲ. ನಗರ ಪ್ರದೇಶದಲ್ಲಿರತಕ್ಕವರಿಗೆ ಹೆಚ್ಚು ಸಿಕ್ಕುತ್ತದೆಂದು ಹೇಳುವುದು ಸರಿಯಲ್ಲ. ನಾವು ಕೊಟ್ಟಿರತಕ್ಕದ್ದು ಎಷ್ಟು ಜನರಿಗೆ, ಮಂಗಳೂರಿನಲ್ಲಿ ಒಬ್ಬರೂ ಇಲ್ಲ ಎಂದು ಹೇಳಬಹುದು ಅಥವಾ ಒಬ್ಬರು ಇರಬಹುದು. ಇವರನ್ನು ಆಯ್ಕೆ ಮಾಡಬೇಕಾದರೆ ಸಂಬಂಧಪಟ್ಟ ಅಕಾಡಮಿ ಅಧ್ಯಕ್ಷರು ಬಾಕಿಯವರ ಜೊತೆ ಚರ್ಚೆ ಮಾಡಿ ನನಗೆ ಲಿಸ್ಟ್ ಕಳುಹಿಸಿ ಕೊಡುತ್ತಾರೆ. ಹಾಗೆಯೇ ನಮ್ಮ ಹತ್ತಿರ ಬೇರೆ ಬೇರೆ ಜಿಲ್ಲೆಗಳಿಂದ ಸೂಚನೆ ಬರುತ್ತವೆ. ಮಾನ್ಯ ಸದಸ್ಯರಿಂದ ಬಂದಂಥ ಅನೇಕ ಸೂಚನೆಗಳನ್ನು ಸೇರಿಸಿದ್ದೇವೆ. ಈಗ ಮಾನ್ಯ ಸದಸ್ಯರು ಹಾನಗಲ್‌ನಲ್ಲಿ ಒಬ್ಬ ಕಲಾವಿದರಿಗೆ ಸಿಕ್ಕಿಲ್ಲ ಎಂದು ಹೇಳಿದರು, ಅದನ್ನು ಗಮನದಲ್ಲಿಡುತ್ತೇನೆ. ಅವರಿಗೆ ಅರ್ಹತೆ ಇದ್ದರೆ ಮುಂದಿನ ಸಾರಿ ಅವರಿಗೆ ಮಾಶಾಸನ ಕೊಡುವ ಯೋಚನೆ ಮಾಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನೃತ್ಯ ಕಲಾವಿದರಿಗೆ ಮಾಶಾಸನ ಕೊಡತಕ್ಕದ್ದು ಇದೆ. ಅದೇ ರೀತಿ ಕ್ಯಾಬರೆ, ಡಿಸ್ಕೋ ಅವರಿಗೆ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ,—ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಯಾರಾದರೂ ಅರ್ಹತೆ ಇರುವವರು ಇದ್ದರೆ ಕಳುಹಿಸಿಕೊಡಿ ನೋಡೋಣ.

ಶ್ರೀ ಬಿ.ಎಂ. ಇದಿನಬ್ಬ.—ಇತ್ತೀಚೆಗೆ ಅರ್ಜಿ ಹಾಕದೇ ಇರತಕ್ಕ ಯಕ್ಷಗಾನ ಕಲಾವಿದರು ನಮ್ಮ ಎದುರಿಗೆ ಬಾರದೆ ಅಲ್ಲಲ್ಲೇ ಉಳಿದಿರುತ್ತಾರೆ. ಅಂತಹವರನ್ನು ಹುಡುಕಿ ಅವರಿಗೆ ಮಾಶಾಸನ ಕೊಡತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾಶಾಸನ ಕೊಡುವುದಕ್ಕೆ ಅರ್ಜಿ ಅಗತ್ಯ ಇಲ್ಲ. ಕೆಲವರು ಅರ್ಜಿ ಹಾಕಿಕೊಳ್ಳುತ್ತಾರೆ. ಕೆಲವನ್ನು ನಾವಾಗಿಯೇ ಗುರುತಿಸುತ್ತೇವೆ. ಆದರೂ ಮಾನ್ಯ ಸದಸ್ಯರ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಆಗಿ ನೇಮಿಸಿಕೊಳ್ಳುವುದರಿಂದ ರೋಸ್ಟರ್ ಪದ್ಧತಿಗೆ ವಿರೋಧವಾಗುವ ಬಗ್ಗೆ

೩೮೮ (೧೨೧) (ಬಿ) ಶ್ರೀ ಬಿ. ರಾಜುಗೌಡ (ಹಾನೂರ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ೫-೭-೮೫ರ ಮೊದಲು ನೇಮಕವಾಗಿದ್ದು, ಈಗಲೂ ಮುಂದುವರಿಯುತ್ತಿರುವ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಆಗಿ ನೇಮಿಸಿಕೊಳ್ಳುವುದರಿಂದ ರೋಸ್ಟರ್ ಪದ್ಧತಿಗೆ ವಿರೋಧವಾಗುವುದಿಲ್ಲವೆ ?

(ಆ) ಸ್ಥಳೀಯ ಅಭ್ಯರ್ಥಿಗಳಾಗಿ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನೇಮಕಾತಿ ಸಮಿತಿ ಮತ್ತು ಲೋಕ ಸೇವಾ ಆಯೋಗದಿಂದ ನೇಮಿಸಲ್ಪಟ್ಟ ನೌಕರರಿಂದ ತೆಗೆದು ಹಾಕಿರುವ ಸ್ಥಳೀಯ ಅಭ್ಯರ್ಥಿಗಳ ಬಗ್ಗೆ ಸರ್ಕಾರದ ನಿಲುವು ಏನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ಸ್ಥಳೀಯ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವಾಗ ಅದರಲ್ಲಿಯೂ ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳುವಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು, ಹಿಂದುಳಿದ ಬುಡಕಟ್ಟು ಜನಾಂಗಕ್ಕೆ ಸೇರಿದ ಮತ್ತು ದೊರಕುವ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಖಾಲಿ ಹುದ್ದೆಗೆ ನೇಮಿಸಿಕೊಳ್ಳಬೇಕೆಂದು ಈ ಅಭ್ಯರ್ಥಿಗಳ ಜೊತೆಗೆ ಅಂಗವಿಕಲ ಅಭ್ಯರ್ಥಿಗಳನ್ನು ಅವರಿಗೆ ವೀಸಲಿಟ್ಟಿರುವ ಹುದ್ದೆಯಷ್ಟು ನೇಮಿಸಿಕೊಳ್ಳಬಹುದೆಂದೂ ಸಹ ಸರ್ಕಾರವು ಆದೇಶ ನೀಡಿದೆ. ಈ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಯಾವುದೇ ಹುದ್ದೆಯನ್ನು ಭರ್ತಿ ಮಾಡುವಾಗ ದೊರಕದಿದ್ದ

ಪ್ರಕರಣದಲ್ಲಿ ಮಾತ್ರ ಇತರೇ ಹಿಂದುಳಿದ ವರ್ಗಗಳ ಮತ್ತು ಸಾಮಾನ್ಯ ಅರ್ಹತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಮಾತ್ರ ಇತರೇ ಹಿಂದುಳಿದ ವರ್ಗಗಳ ಮತ್ತು ಸಾಮಾನ್ಯ ಅರ್ಹತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದಿಲ್ಲ ಎಂಬುದನ್ನು ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಜಿ. ರಾಜುಗೌಡ.—ಈ ಸರ್ಕಾರಿ ಆಜ್ಞೆಯಿಂದ ವಿನಾಸಲಾತಿಗೆ ಧಕ್ಕೆ ಬಂದರೆ ಮುಂದೆ ಪ್ರಕಟವಾಗತಕ್ಕ ಹುದ್ದೆಯಲ್ಲಿ ಅವರಿಗೆ ಖಾಯಂ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ? ಕರ್ನಾಟಕ ಲೋಕಸೇವಾ ಆಯೋಗದಿಂದ, ನೇಮಕಾತಿ ಸಮಿತಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಅವಕಾಶ ಸಿಕ್ಕುತ್ತದೆಯೇ ? ವಿದ್ಯಾರ್ಹತೆಯ ಮೇಲೆ ಅನೇಕ ವರ್ಷಗಳ ಕಾಲ ಕೆಲವರು ಸೇವೆಯನ್ನು ಸಲ್ಲಿಸಿದ್ದಾರೆ. ಅವರಿಗೆ ವಯೋಮಿತಿಯ ರಿಯಾಯಿತಿಯನ್ನು ೫ ವರ್ಷಗಳ ಬದಲು ೧೦ ವರ್ಷ ಗೊತ್ತು ಮಾಡಿದ್ದೀರಿ. ಅದನ್ನು ಸಂಪೂರ್ಣವಾಗಿ ಕೈಬಿಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರಿ ಭಾಷೆ ಅದು ನಾವು ಎಷ್ಟೇ ಹೇಳಿದರೂ ಅರ್ಥ ಆಗುವುದು ಕಷ್ಟವಾಗುತ್ತದೆ ಆದ್ದರಿಂದ, ನನ್ನ ಭಾಷೆಯಲ್ಲಿ ಹೇಳುತ್ತೇನೆ. ೨–೩ ತರಹದಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡುತ್ತಾರೆ. ಕೆಲವು ಪ್ರಸಂಗಗಳಲ್ಲಿ ವಿನಾಸಲಾತಿ ನಿಯಮಗಳು ಇವೆ. ಚಾಚೂ ತಪ್ಪದೆ ನಿಯಮಗಳನ್ನು ಅನುಸರಿಸಿ ಮಾಡಿದ್ದೇವೆ. ಕೆಲವು ಸಂದರ್ಭಗಳಲ್ಲಿ ಕಟ್ಟು ನಿಟ್ಟಾಗಿ ನಿಯಮ ಪಾಲನೆಯಾಗಿಲ್ಲ. ಸಾಮಾನ್ಯವಾಗಿ ಹೊರಡಿಸಿದಂಥ ಆದೇಶ ಏನು ಎಂದರೆ ಯಾವ ಹುದ್ದೆಗಳಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಇರುತ್ತಾರೆ ಅಷ್ಟು ಜನರನ್ನು ತೆಗೆದುಕೊಳ್ಳಬೇಕು. ವಿನಾಸಲಾತಿಯಲ್ಲಿ ಅಕಸ್ಮಾತ್ ಅವರಿಗೆ ಸಿಕ್ಕದೇ ಇದ್ದರೆ, ಹಿಂದುಳಿದ ವರ್ಗದವರಿಗೆ, ಹಿಂದುಳಿದ ಬುಡಕಟ್ಟಿನವರಿಗೆ ತೆಗೆದುಕೊಳ್ಳಬೇಕು. ಅವರು ಸಿಕ್ಕದೇ ಇದ್ದರೆ ಬೇರೆಯವರನ್ನು ತೆಗೆದುಕೊಳ್ಳಬೇಕೆಂದು ಈ ಸರ್ಕಾರಿ ಆದೇಶದ ಅರ್ಥ. ಆಗಿದ್ದರೂ ಕೂಡ ಕೆಲವು ಭಾಗದಲ್ಲಿ ಕೆಲವು ಡಿಪಾರ್ಟ್‌ಮೆಂಟಿನ ಕೆಲವು ಹುದ್ದೆಗಳಿಗೆ ಇನ್ನೂ ಸಾಕಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದವರ ಸಂಖ್ಯೆ ಬಾರದೇ ಇದ್ದರೆ, ಇನ್ನು ಮುಂದೆ ಡಿಪಾರ್ಟ್‌ಮೆಂಟಿನಲ್ಲಿ ರೆಕ್ರೂಟ್‌ಮೆಂಟ್ ಮಾಡುವಾಗ ಮೊಟ್ಟಮೊದಲು ಅಂತಹ ಅಭ್ಯರ್ಥಿಗಳನ್ನು ಆರಿಸಿ ಮೊದಲು ಆ ಪ್ರಮಾಣವನ್ನು ತುಂಬಬೇಕು. ತಾವು ಹೇಳುವ ಸೂಚನೆಯನ್ನು ಇನ್ನು ಮುಂದೆ ಮಾಡುವುದರಲ್ಲಿ ಗಮನದಲ್ಲಿಡುತ್ತೇನೆ.

ಆ) ನೇಮಕಾತಿ ಸಮಿತಿಗಳ ಮತ್ತು ಲೋಕ ಸೇವಾ ಆಯೋಗದ ಮುಖಾಂತರ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಿಸಿಕೊಂಡಿದ್ದರಿಂದ ಕೆಲಸ ಕಳೆದುಕೊಂಡಿರುವ ಸ್ಥಳೀಯ ಅಭ್ಯರ್ಥಿಗಳು ಇನ್ನು ಮುಂದೆ ಪ್ರಕಟಿಸುವ ಹುದ್ದೆಗಳಲ್ಲಿ ನೇಮಕಾತಿ ನಿಯಮಗಳ ಪ್ರಕಾರ ನೇಮಕಾತಿ ಹೊಂದಲು ಪ್ರಯತ್ನಿಸಬಹುದು, ಅಂತಹ ಅಭ್ಯರ್ಥಿಗಳು ಸರಕಾರಿ ಸೇವೆಗೆ ಸೇರಲು ನಿಗದಿಪಡಿಸಿದ ಗರಿಷ್ಠ ವಯೋಮಿತಿ ದಾಟಿರಬಹುದಾದ ಪ್ರಕರಣಗಳಲ್ಲಿ ಅವರಿಗೆ ಅನುಕೂಲವಾಗಲೆಂದು ಅವರಿಗೆ ಈಗಿರುವ ೫ ವರ್ಷಗಳ ಬದಲಾಗಿ ಒಟ್ಟಿಗೆ ೧೦ ವರ್ಷಗಳ ವಯೋಮಿತಿ ರಿಯಾಯಿತಿ ಕೊಡುವುದಕ್ಕಾಗಿ ಇಷ್ಟರಲ್ಲೆ ಸಂಬಂಧಿಸಿದ ನಿಯಮಗಳ ಬದಲಾವಣೆ ಮಾಡಲಾಗುತ್ತಿದೆ. ಇದರ ಬಗ್ಗೆ ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ. ರೂಲ್ಸ್ ಅಮೆಂಡ್ ಮಾಡುತ್ತಿದ್ದೇವೆ. ಕೆಲಸ ಕಳೆದುಕೊಂಡ ಸ್ಥಳೀಯ ಅಭ್ಯರ್ಥಿಗಳಲ್ಲಿ ಗ್ರೂಪ್–ಸಿ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದವರೇ ಹೆಚ್ಚಾಗಿರುವುದರಿಂದ ಕರ್ನಾಟಕ ಸಿವಿಲ್ ಸೇವಾ (ವಿಶೇಷ) ನಿಯಮಗಳು, ೧೯೮೨ರಲ್ಲಿ ಸರಕಾರದ ಗ್ರೂಪ್–ಸಿ ನೇರ ನೇಮಕಾತಿ ಹುದ್ದೆಗಳಲ್ಲಿ ಶೇಕಡ ೫೦ ಹುದ್ದೆಗಳನ್ನು ಸ್ಟೈಪಂಡರಿ ಪದವೀಧರರು ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಕಾದಿರಿಸಲಾಗಿದೆ ಮತ್ತು ೫–೭–೮೩ಕ್ಕಿಂತ ಮೊದಲು ನೇಮಕ ಹೊಂದಿ ಇದುವರೆಗೂ ಸ್ಥಳೀಯ ಅಭ್ಯರ್ಥಿಗಳಾಗಿ ಮುಂದುವರೆದಿರುವವರ ಸೇವೆಯನ್ನು ಸಕ್ರಮಗೊಳಿಸಿದ ನಂತರ ಗ್ರೂಪ್–ಸಿ ಹುದ್ದೆಗಳಲ್ಲಿ ಕಾದಿರಿಸಲಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸ್ಥಳೀಯ ಅಭ್ಯರ್ಥಿಗಳ ಸಂಖ್ಯೆ ಅತಿ ಕಡಿಮೆಯಾಗುತ್ತದೆ. ಆದುದರಿಂದ ಉಳಿದ ಸ್ಥಳೀಯ ಅಭ್ಯರ್ಥಿಗಳಿಗೆ ತೀವ್ರವಾಗಿ ಕೆಲಸ ಸಿಗುವ ಸಾಧ್ಯತೆ ಇದೆ.

ಶ್ರೀ ಬಿ. ರಾಜುಗೌಡ.—ವಿಶ್ವವಿದ್ಯಾನಿಲಯಗಳಲ್ಲಿ ಹಂಗಾಮಿಯಾಗಿ ೧೫ ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ಈ ಬಗ್ಗೆ ಸರ್ಕಾರಿ ಆಜ್ಞೆ ಹೊರಡಿಸಿದ್ದರೂ ಅವರನ್ನು ಖಾಯಂ ಮಾಡಿಲ್ಲ. ಈ ಬಗ್ಗೆ ಉಪಕುಪತಿಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ವಿಶ್ವವಿದ್ಯಾನಿಲಯಗಳಿಗೂ ತಿಳಿಸಿದ್ದೇವೆ. ಅವರು ಸರಿಪಡಿಸುತ್ತಾರೆಂದು ಭಾವಿಸಿಕೊಂಡಿದ್ದೇವೆ.

ಶಹಾಬಾದ್‌ನ ಸರಕಾರಿ ಆಸ್ಪತ್ರೆ

೩೯ (೨೦೩) ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಶಹಾಬಾದ್ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಹಾಸಿಗೆಗಳ ವ್ಯವಸ್ಥೆ ಇದೆ ? ಮತ್ತು ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಯಾವ ಯಾವ ಸೌಲಭ್ಯ ದೊರಕುವುದು ?

ಆ) ಈ ಕಟ್ಟಡದ ಶಂಕುಸ್ಥಾಪನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ೧೯೮೪ರಲ್ಲಿ ಮಾಡಿದ್ದು ಈ ಕಟ್ಟಡದ ಕಾರ್ಯ ಇನ್ನೂ ಕುಂಟುತ್ತಾ ನಡೆದಿರಲು ಕಾರಣವೇನು ?

ಇ) ಒಟ್ಟು ಎಷ್ಟು ಹಣದಲ್ಲಿ ಈ ಆಸ್ಪತ್ರೆ ತಯಾರಾಗುವ ನಿರೀಕ್ಷೆ ಇದೆ ? ಮತ್ತು ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ? ಪ್ರಸ್ತುತ ವರ್ಷದಲ್ಲಿ ಎಷ್ಟು ಹಣ ಒದಗಿಸಲಾಗಿದೆ ?

ಈ) ೧೯೮೭–೮೮ ರೊಳಗಾಗಿ ಈ ಆಸ್ಪತ್ರೆ ಕಟ್ಟಡ ಪೂರ್ತಿಮಾಡಲಾಗುವುದೆ ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಶಹಾಬಾದ್ ಸರ್ಕಾರಿ ಆಸ್ಪತ್ರೆಯಲ್ಲಿ ಹಾಲಿ ನಾಲ್ಕು ಹಾಸಿಗೆಗಳ ಸೌಲಭ್ಯವಿದ್ದು ಪ್ರಸ್ತುತ ಪ್ರಾಥಮಿಕ ಆರೋಗ್ಯ ಚಿಕಿತ್ಸಾ ಸೇವೆಗಳನ್ನೊದಗಿಸಲಾಗುತ್ತಿದೆ.

ಆ) ಶಹಾಬಾದ್‌ನಲ್ಲಿ ೩೦ ಹಾಸಿಗೆಗಳ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಈಗಾಗಲೇ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಕಟ್ಟಡ ನಿರ್ಮಾಣಕಾರ್ಯ ಈಗ ಪ್ರಗತಿಯಲ್ಲಿದೆ.

ಇ) ಕಟ್ಟಡ ನಿರ್ಮಾಣವನ್ನು ಒಟ್ಟು ೮,೮೦,೦೦೦ ರೂ.ಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ಇದಕ್ಕಾಗಿ ೧೯೮೫–೮೬ನೇ ಸಾಲಿನವರೆಗೂ ೪೩,೦೦೦ ರೂ.ಗಳು ಖರ್ಚಾಗಿವೆ. ಪ್ರಸ್ತುತ ವರ್ಷದಲ್ಲಿ ಇದಕ್ಕೆ ೧,೦೦,೦೦೦ ರೂ.ಗಳನ್ನು ಒದಗಿಸಲಾಗಿದೆ.

ಈ) ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ೬೨ ಸಾವಿರ ಜನಸಂಖ್ಯೆ ಇರತಕ್ಕ ಪಟ್ಟಣದಲ್ಲಿ ಕೇವಲ ೩೦ ಹಾಸಿಗೆಗಳ ಆಸ್ಪತ್ರೆ ಕಟ್ಟಡಕ್ಕೆ ೧೯೮೪ರಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಅಡಿಗಲ್ಲು ಹಾಕಿದರು. ಅಂದು ಮೂರು ಕಟ್ಟಡಗಳಿಗೆ ಅಡಿಗಲ್ಲು ಹಾಕಿದ್ದರು. ಆ ಪೈಕಿ ಕೆ.ಎಸ್.ಆರ್.ಟಿ.ಸಿ. ಕಟ್ಟಡದ ಕೆಲಸ ಮುಗಿಯುತ್ತಾ ಇದೆ. ದವಾಖಾನೆಗೆ ಸಂಬಂಧಪಟ್ಟಂತೆ ಅಲ್ಲಿ, ವಾಸ ಮಾಡುವ ವೈದ್ಯರಿಗೆ ಹಾಗೂ ದಾದಿಯರಿಗೆ ಸಂಬಂಧಪಟ್ಟಂತೆ ೩೦ ಲಕ್ಷ ರೂಪಾಯಿಗಳ ಪ್ರಾಜೆಕ್ಟ್‌ನ್ನು ೧೯೮೩ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಕಟ್ಟಡಕ್ಕಾಗಿ ೮೪–೮೫ರಲ್ಲಿ ೪೩,೦೦೦ ರೂಪಾಯಿಗಳಲ್ಲಿ ಈ ವರ್ಷ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರೀತಿ ಕೊಡುತ್ತಾ ಹೋದರೆ ಇನ್ನು ೧೦ ವರ್ಷಗಳಾದರೂ ಈ ಆಸ್ಪತ್ರೆ ಕಟ್ಟಡ ಮುಗಿಯುವುದಿಲ್ಲ. ಇವೊತ್ತು ಶಹಾಬಾದ್ ಪಟ್ಟಣ ಬಹಳ ಸ್ಲಂನಿಂದ ಕೂಡಿದ್ದು ಆ ಊರಿನಲ್ಲಿ ತ್ವರಿತವಾಗಿ ಆರೋಗ್ಯದ ಬಗ್ಗೆ ಚಿಂತನೆ ಮಾಡಬೇಕಾಗಿದ್ದು ಇನ್ನು ಎರಡು ವರ್ಷದೊಳಗಾದರೂ ಆಸ್ಪತ್ರೆ ಕಟ್ಟಡವನ್ನು ಮುಗಿಸುವ ಬಗ್ಗೆ ಭರವಸೆ ಕೊಡುತ್ತೀರಾ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ಈ ವರ್ಷ ಒಂದುಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ ಮುಂದಿನ ವರ್ಷ ಹೆಚ್ಚು ಕೊಡುವುದಕ್ಕೆ ಪ್ರಯತ್ನ ಮಾಡುವುದರ ಜೊತೆಗೆ ಕಟ್ಟಡದ ಕೆಲಸವನ್ನು ಒಂದೆರಡು ವರ್ಷಗಳಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡಲಾಗುವುದೆನ್ನುವ ಭರವಸೆ ಕೊಡುತ್ತೇನೆ.